

## ಅಡಿಕೆ ತೋಟದಲ್ಲಿ ಆನಂದ್-ಚಂದನಿಕಾ

ತೋಟವನ್ನೆಲ್ಲ ಕುತೂಹಲದಿಂದ ನೋಡಿದವಳು ಎಕರೆಗೆ ಎಷ್ಟು ಉತ್ಪನ್ನ ಬರಬಹುದು ಅಂತ ಕೇಳಿದಳು. ಹೇಗೆ ಹೇಳುವುದು? ಅಡಕೆ ರೇಟು ಒಳ್ಳೇದಿದ್ದಾಗ ಹತ್ತು ಲಕ್ಷದವರೆಗು ಬಂದಿದೆ ಅಂತ ಹೇಳಿದ. ಏನೋ ಆಲೋಚಿಸುವಂತೆ ಕಂಡಳು. ‘ತಣ್ಣನೆ ಎಳನೀರು ಕುಡಿಯುತ್ತೀಯ?’ ಅಂತ ಕೇಳಿದವ ಕೆಲಸದವನಿಗೆ ಹೇಳಿ ಎಳನೀರು ಇಳಿಸಿ ಕೆತ್ತಿಸಿಕೊಟ್ಟ. ನೀರು ಮೈಮೇಲೆ ಬೀಳದಂತೆ ಗುಟುಕಾಗಿ ಕುಡಿಯುತ್ತ ಮರದ ತುಂಡೊಂದರ ಮೇಲೆ ಕುಳಿತಳು. ಆನಂದ ಕೆಳಗೆ ಬಿದ್ದ ಸೋಗೆಯನ್ನು ಕತ್ತಿಯಿಂದ ತುಂಡು ಮಾಡಿ ಮರದ ಬುಡಕ್ಕೆ ಹಾಕುತ್ತಿದ್ದ. ಅವನ ಚಲಿಸುವ ಸ್ನಾಯುಖಂಡಗಳನ್ನು ವೀಕ್ಷಿಸಿದವಳು ‘ಆನಂದ್, ನೀನು ಜಿಮ್‌ಗೆ ಹೋಗ್ತಿಯಾ?’ ಕೇಳಿದಳು. ಅಚ್ಚರಿಪಟ್ಟವ ‘ನಂಗ್ಯಾಕೆ ಜಿಮ್ಮು ಮತ್ತೊಂದೆಲ್ಲ... ಕೆಲಸವೆ ಬೇಕಾದಷ್ಟಿರುವಾಗ? ಅಲ್ಲದೆ ಇಲ್ಲಿ ಅಂತದೆಲ್ಲಾ ಇಲ್ಲ’ ಅಂತ ನಕ್ಕ. ಬರುವಾಗ ನೋಡಿದ ಕೆರೆ ನೆನಪಾಗಿ ‘ಈಜು ಬರುತ್ತಾ?’ ಕೇಳಿದಳು. ‘ಅದು ಮಾತ್ರ ಮೀನಿನ್ಹಾಗೇ. ಹೊಳೇಲಿ ಚಿಕ್ಕಂದಿನಿಂದಲೆ ರೂಢಿ’ ಅಂದ. ‘ಅದಕ್ಕೇ ಮತ್ತೆ. ಫಿಟ್ಟಾದ ಬಾಡಿ’ ಬಾಯಿಯಿಂದ ಒಸರಿದ ಎಳನೀರನ್ನು ಮುಂಗೈಯಿಂದ ಒರೆಸಿಕೊಳ್ಳುತ್ತ ಹೇಳಿದಳು. ಅವಳ ಕಣ್ಣುಗಳಲ್ಲಿಯ ಮೆಚ್ಚುಗೆ ನೋಡಿ ಮುಜುಗರಕ್ಕೊಳಗಾದ. ‘ಕೆಲಸ ಮಾಡುತ್ತಿದ್ದರೆ ಎಲ್ಲರಿಗೂ ಇರತದೆ, ಅದೇನು ಮಹಾ!...’ ಅಂದ. ವಾಪಸು ಹೊರಡುವಾಗ ಕೆರೆಯ ಬಗ್ಗೆ ವಿಚಾರಿಸಿದಳು. ಸಮಯವಿದ್ದರೆ ಈಗಲೆ ಹೋಗಬಹುದಿತ್ತು. ಆದರೆ ಆಗಲೆ ಹನ್ನೆರಡು ಗಂಟೆ. ಅದರ ಬಗ್ಗೆ ಹೇಳಿ, ಮತ್ತೊಮ್ಮೆ ಬರೋಣ ಅಂದ. ಅವನ ಬೆನ್ನಿಗೆ ಅದೇ ಅನುಭವ ಮರುಕಳಿಸಿತು. ಊಟವಾದ ಮೇಲೆ ಅರ್ಧ ಗಂಟೆ ವಿಶ್ರಮಿಸಲು ಹೋದ ಆನಂದ.

ಚಹ ಕುಡಿಯುವಾಗ ಕೇಳಿದ ಆನಂದ: ‘ರಿಸರ್ಚ್ ಮುಗಿದ ನಂತರ ಏನು ಮಾಡಬೇಕೆಂದಿದೀಯ?’ ಅವಳು ಕಪ್ಪನ್ನು ಕೈಯಲ್ಲಿ ಹಿಡಿದು ಒಂದು ಕ್ಷಣ ಯೋಚನೆಯಲ್ಲಿದ್ದಳು. ‘ಔರಂಗಾಬಾದದಲ್ಲಿ ಕಾಲೇಜಿನಲ್ಲಿ ಪ್ರಯತ್ನಿಸ್ತೀನಿ. ಪುಣೆಯಲ್ಲಿ ಒಂದೆರಡು ಕಾಲೇಜಿನಲ್ಲಿ ಪಪ್ಪನೆ ಬೋರ್ಡ್ ಮೆಂಬರಿದಾರೆ. ಒಂದ್ಕಡೆ ಸಿಕ್ಕೆ ಸಿಗುತ್ತೆ.’ ವಿಶ್ವಾಸ ತುಂಬಿತ್ತು ದನಿಯಲ್ಲಿ. ಅವಳು ಕೈಯ ಹಾವಭಾವ ಮಾಡುತ್ತ ಮಾತನಾಡುತ್ತಿದ್ದರೆ ಬಕುಲಾ ಮುಗುಳ್ನಗುತ್ತ ನೋಡುತ್ತ